ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

ಸಂ: ಸ.ಶಿ.ಅ/ಒಒಎಸ್‌ಸಿ/ಮದರಸ/ಸುತ್ತೋಲೆ/2010–11 ದಿನಾಂಕ: 24.06.2010

# ಸುತ್ತೋಲೆ

ವಿಷಯ: ರಾಜ್ಯದ ಅನುದಾನ ರಹಿತ ವಸತಿಯುತ ಮದರಸ ಹಾಗೂ ಸಂಸ್ಕೃತ ಪಾಠ ಶಾಲೆಗಳಲ್ಲಿ ಕಲಿಯುತ್ತಿರುವ ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳಿಗೆ ಸರ್ವ ಶಿಕ್ಷಣ ಅಭಿಯಾನದ ಸೌಲಭ್ಯಗಳು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ದಿನಾಂಕ: 11.05.2010 ಹಾಗೂ ದಿನಾಂಕ: 16.04.2007

**********

ಉಲ್ಲೇಖದಲ್ಲಿರುವ ಸುತ್ತೋಲೆಯಲ್ಲಿ ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳು ಅನುದಾನ ರಹಿತ ಹಾಗೂ ವಸತಿಸಹಿತ ಮದರಸ ಹಾಗೂ ಸಂಸ್ಕೃತ ಪಾಠ ಶಾಲೆಗಳಲ್ಲಿ ಕೇವಲ ಧಾರ್ಮಿಕ ಶಿಕ್ಷಣವನ್ನು ಪಡೆಯುತ್ತಿದ್ದು, ಔಪಚಾರಿಕ ಶಿಕ್ಷಣದಿಂದ ವಂಚಿತರಾಗುವ ಮಕ್ಕಳಿಗೆ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಹಣಕಾಸಿನ ಸೌಲಭ್ಯ ವಿಸ್ತರಿಸಿ ಸದರಿ ಮಕ್ಕಳಿಗೆ ಔಪಚಾರಿಕ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಸದರಿ ಮಕ್ಕಳು ಶಾಲೆಗೆ ಸೇರದೇ ಇರುವವರಾಗಿರಬಹುದು ಅಥವಾ ಶಾಲೆ ಸೇರಿ ಬಿಟ್ಟವರಾಗಿರಬಹುದು. ಈ ಮಕ್ಕಳಿಗೆ ಸದರಿ ಸಂಸ್ಥೆಗಳಲ್ಲಿಯೇ ದಿನದಲ್ಲಿ ಕನಿಷ್ಠ 4 ಗಂಟೆಗಳ ಅವಧಿಗೆ ವರ್ಷದಲ್ಲಿ 10 ತಿಂಗಳು ನಿರಂತರವಾಗಿ ಔಪಚಾರಿಕ ಶಿಕ್ಷಣವನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಲು ಸಂಸ್ಥೆಯ ಮುಖಂಡರ ಸಮ್ಮತಿ ಪಡೆದು ಒಪ್ಪಿಗೆ ನೀಡುವ ಸಂಸ್ಥೆಗಳಿಗೆ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಅನುದಾನ ಸೌಲಭ್ಯವನ್ನು ವಿಸ್ತರಿಸಬಹುದಾಗಿದೆ. ಈ ಬಗ್ಗೆ ವಿವರಗಳು ಕೆಳಗಿನಂತಿವೆ.

✓ ಸರ್ವ ಶಿಕ್ಷಣ ಅಭಿಯಾನದ ಸೌಲಭ್ಯ ಪಡೆಯಲು ಅರ್ಹ ಮಕ್ಕಳು.

1. ನೊಂದಾಯಿತ ಅಥವಾ ಅಂಗೀಕೃತ ಮದರಸ ಹಾಗೂ ಸಂಸ್ಕೃತ ಪಾಠ ಶಾಲೆಗಳಲ್ಲಿ ಕೇವಲ ಧಾರ್ಮಿಕ ಶಿಕ್ಷಣ ಮಾತ್ರ ಪಡೆಯುತ್ತಿದ್ದು, ಔಪಚಾರಿಕ ಶಿಕ್ಷಣದಿಂದ ವಂಚಿತರಾಗಿರುವ 07 ರಿಂದ 14 ವಯೋಮಾನದ ಶಾಲೆಯಿಂದ ಹೊರಗುಳಿದ ಮಕ್ಕಳು (ಶಾಲೆಗೆ ಸೇರಿಲ್ಲದ / ಶಾಲೆ ಬಿಟ್ಟ ಮಕ್ಕಳು) ಈ ಸೌಲಭ್ಯದ ಫಲಾನುಭವಿಗಳು.
2. ಔಪಚಾರಿಕ ಶಿಕ್ಷಣವನ್ನು ಶಾಲೆಯಲ್ಲಿ ಪಡೆಯುತ್ತಿರುವ ಮಕ್ಕಳಿಗೆ ಈ ಸೌಲಭ್ಯವನ್ನು ವಿಸ್ತರಿಸಕೂಡದು.

ದೂರವಾಣಿ : 080 22483040, 22483041 ಫ್ಯಾಕ್ಸ್ : 22126718 www.schooleducation.kar.nic.in/SSA

✓ ಸರ್ವ ಶಿಕ್ಷಣ ಅಭಿಯಾನದ ಸೌಲಭ್ಯ ಪಡೆಯುಲು ಅರ್ಹ ಮದರಸ ಸಂಸ್ಥೆಗಳು

1) ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಕೇವಲ ಧಾರ್ಮಿಕ ಶಿಕ್ಷಣವನ್ನು ಬೋಧಿಸುತ್ತಿರುವ ಮದರಸ /ಸಂಸ್ಕೃತ ಪಾಠ ಶಾಲೆಗಳು ಔಪಚಾರಿಕ ಶಿಕ್ಷಣವನ್ನು ನೀಡಲು ಒಪ್ಪಿಗೆಯನ್ನು ಲಿಖಿತವಾಗಿ ನೀಡಿದರೆ ಅಂತಹ ಸಂಸ್ಥೆಗಳು ಈ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಈಗಾಗಲೇ ಸರ್ಕಾರದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಈ ಸೌಲಭ್ಯವನ್ನು ಪಡೆಯಲು ಅರ್ಹತೆ ಹೊಂದುವುದಿಲ್ಲ. ಈ ಬಗ್ಗೆ ಪರಸ್ಪರ ಒಡಂಬಡಿಕೆಯಲ್ಲಿ ಪ್ರಸ್ತಾಪವಿರಬೇಕು.

2) ಲಿಖಿತ ಒಪ್ಪಿಗೆಯು ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.

- ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಗೊತ್ತುಪಡಿಸಿರುವ ಪಠ್ಯಕ್ರಮ, ಪರೀಕ್ಷೆ ಹಾಗೂ ಮೌಲ್ಯಮಾಪನವನ್ನು ಸಕಾಲದಲ್ಲಿ ನಡೆಸುವ ಬಗ್ಗೆ ಒಪ್ಪಿಗೆ.
- ಒಂದು ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ 10 ತಿಂಗಳ ವರೆಗೆ ದಿನದಲ್ಲಿ ಕನಿಷ್ಠ 4 ಗಂಟೆ ಔಪಚಾರಿಕ ಶಿಕ್ಷಣ ನೀಡಲು ಒಪ್ಪಿಗೆ.
- ಕೇಂದ್ರದ ವೇಳಾಪಟ್ಟಿಯು ನಮ್ಯವಾಗಿದ್ದು ಮುಂಚಿತವಾಗಿ ಇಲಾಖೆಗೆ ವರದಿ ಮಾಡಲು ಒಪ್ಪಿಗೆ.
- ಇಲಾಖೆಯು ಶಿಕ್ಷಕರನ್ನು ನಿಯೋಜಿಸಿದ್ದಲ್ಲಿ ಶಿಕ್ಷಕರನ್ನು ಮದರಸ/ಸಂಸ್ಕೃತ ಪಾಠ ಶಾಲೆಗಳಲ್ಲಿ ಕೆಲಸ ನಿರ್ವಹಿಸಲು ಅನುಮತಿ ನೀಡಲು ಒಪ್ಪಿಗೆ.
- ಇಲಾಖೆಯ ಶಿಕ್ಷಕರನ್ನು ನೀಡಲು ಸಾಧ್ಯವಾಗದ ಕಡೆ ಸ್ವಯಂ ಸೇವಕರನ್ನು ಸಂಬಂಧಿಸಿದ ಸಂಸ್ಥೆ ನೇಮಕ ಮಾಡಿಕೊಳ್ಳಲು ಒಪ್ಪಿಗೆ ಹಾಗೂ ಶಿಕ್ಷಕ ತರಬೇತಿ ಪಡೆದ ಸ್ವಯಂ ಸೇವಕರನ್ನು ತೆಗೆದುಕೊಳ್ಳಲಾಗುತ್ತದೆ ಎಂಬ ಒಪ್ಪಿಗೆ.
- ಸ್ವಯಂ ಸೇವಕರಿಗೆ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ 15 ದಿನ ತರಬೇತಿಯನ್ನು ಇಲಾಖೆ ನೀಡಿದಾಗ ಅವರನ್ನು ಕಳುಹಿಸಿಕೊಡಲು ಒಪ್ಪಿಗೆ.
- ಇಲಾಖೆಯ ವಿವಿಧ ಹಂತದ ಉಸ್ತುವಾರಿದಾರರು/ಅಧಿಕಾರಿಗಳು ವೇಳಾಪಟ್ಟಿಯಂತೆ ಕೇಂದ್ರಕ್ಕೆ ಸಂದರ್ಶನ ನೀಡಲು ಒಪ್ಪಿಗೆ.

3) ನಿರ್ವಹಿಸಬೇಕಾಗಿರುವ ದಾಖಲೆಗಳು

- ವಿದ್ಯಾರ್ಥಿ ಮತ್ತು ಅಧ್ಯಾಪಕರ ಹಾಜರಿ ವಹಿ.
- ವಿದ್ಯಾರ್ಥಿಯ ವೈಯಕ್ತಿಕ ಮಾಹಿತಿ ಹಾಗೂ ಶೈಕ್ಷಣಿಕ ಪ್ರಗತಿ ವಹಿ.
- ಹಣಕಾಸಿಗೆ ಸಂಬಂಧಿಸಿದಂತೆ ನಗದು ಪುಸ್ತಕ.
- ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳು

- ಸಂದರ್ಶಕರ ವಹಿ
- ಸ್ವಯಂ ಸೇವಕರು ನಿರ್ವಹಿಸಿದ ಕಾರ್ಯದ ವಿವರ ದಿನಾಂಕವಾರು.

4) ಹಣಕಾಸಿನ ವಿವರ: (50 ಮಕ್ಕಳಿಗೆ) (2010-11ನೇ ಸಾಲಿನಿಂದ ಪರಿಷ್ಕೃತ ಘಟಕ ವೆಚ್ಚ)

| | |
|---|---|
| ಸ್ನ್ಯಾಕ್ಸ್ (5 ರೂx 50 x 300 ದಿನ) | 75,000 |
| ಸ್ವಯಂಸೇವಕರಿಗೆ ಗೌರವಧನ (2500 x 2 x 10 ) (ಗರಿಷ್ಠ ಮೊತ್ತ) | 50,000 |
| ಸಾದಿಲ್ವಾರು / ಟಿ.ಎಲ್.ಎಂ | 10,000 |
| ಮಕ್ಕಳಿಗೆ ಬರೆಯವ ಸಾಮಗ್ರಿ 300 x 50 | 15,000 |
| | 1,50,000 |

ವಿಶೇಷ ಸೂಚನೆ:- ಮಧ್ಯಾಹ್ನದ ಉಪಹಾರ ಯೋಜನೆಯಡಿಯಲ್ಲಿ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ. ಆಹಾರ ಧಾನ್ಯದ ಬೇಡಿಕೆಯನ್ನು ಎ.ಡಿ.ಪಿ.ಐ (ಎಂ.ಎಂ.ಎಸ್) ಇವರಿಗೆ ಕೇಂದ್ರದ ಅಧ್ಯಾಪಕರು ನೀಡುವುದು. ಸಾದಿಲ್ವಾರು ಖರ್ಚಿಗೆ ಸ್ನ್ಯಾಕ್ಸ್‌ಗಾಗಿ ನೀಡುವ ಹಣದಲ್ಲಿ ಖರ್ಚುಭರಿಸಿ, ಆಹಾರ ಸಿದ್ಧಪಡಿಸಿ ಬಡಿಸುವುದು. ಉಳಿದ ಹಣದಿಂದ ಸಂಜೆ ಮೊಳಕೆ ಕಾಳು/ಬಾಳೆಹಣ್ಣು/ ಕೋಳಿ ಮೊಟ್ಟೆ / ಹಾಲು / ಬ್ರೆಡ್ ನೀಡುವುದು.

5) ಹಣಕಾಸಿನ ಬಿಡುಗಡೆ

- ಕೇಂದ್ರ ಪ್ರಾರಂಭವಾದ ಕೂಡಲೇ ತನಿಖೆ ನಡೆಸುವುದು. ನೀಡಿರುವ ಮಾಹಿತಿ ಮತ್ತು ತನಿಖೆಯಲ್ಲಿ ಕಂಡು ಬಂದಂತೆ 40 % ಹಣವನ್ನು 15 ದಿನಗಳಲ್ಲಿ ಬಿಡುಗಡೆ ಮಾಡುವುದು. ಈ ಸಮಯದಲ್ಲಿ ಶಿಕ್ಷಕರ ವ್ಯವಸ್ಥೆ ಕೊಠಡಿ, ಇತರ ಸೌಲಭ್ಯ, ಒಪ್ಪಿಗೆ ಪತ್ರಗಳನ್ನು ಪರಿಶೀಲಿಸಿ ಓಓಎಸ್‌ಸಿ ಎಂದು ದೃಢವಾದ ನಂತರ ಗಮನಿಸಿ ಹಣ ಬಿಡುಗಡೆ ಮಾಡುವುದು.
- ಎರಡನೆ ಕಂತಿನ 40 ಭಾಗವನ್ನು ಕೇಂದ್ರ ಯುಕ್ತವಾಗಿ ನಡೆಯುತ್ತಿದೆ ಎಂದು ಖಾತ್ರಿ ಪಟ್ಟಾಗ ಮತ್ತು ಕಲಿಕೆಯು ಯುಕ್ತವಾಗಿ ನಡೆಯುತ್ತಿದೆ ಎಂದು ಕಂಡು ಬಂದಾಗ 05 ತಿಂಗಳು ಕಳೆದ ಬಳಿಕ ತನಿಖೆ ನಡೆಸಿ 15 ದಿನಗಳೊಳಗೆ ಧನ ಸಹಾಯಕ್ಕೆ ಅರ್ಹವೆಂದು ಕಂಡುಬಂದಲ್ಲಿ ನೀಡಲಾಗುವುದು. ಅಲ್ಲವಾದರೆ ವ್ಯತ್ಯಯಗಳ ಕುರಿತು ಹಿಂಬರಹ ನೀಡಲು ಕ್ರಮ ಮಾಡುವುದು.
- ಉಳಿದ 20 ಭಾಗ ಹಣವನ್ನು ಮಕ್ಕಳ ಕಲಿಕೆ ಶೇಕಡ 60 ಇರುವುದನ್ನು ಖಾತ್ರಿಪಡಿಸಿಕೊಂಡು ನೀಡುವುದು.
- ಮಕ್ಕಳ ಸಂಖ್ಯೆ 15 ಕ್ಕಿಂತ ಕಡಿಮೆ ಇದ್ದರೆ ಸ್ವಯಂ ಸೇವಕರ ಗೌರವ ಧನವನ್ನು ಪ್ರತಿ ಮಗುವಿಗೆ 100/- ರೂ ನಂತೆ ಪ್ರತಿ ತಿಂಗಳಿಗೆ ನೀಡಬಹುದು. ಮಧಾಹ್ನದ ಉಪಹಾರಕ್ಕೆ ಘಟಕ ವೆಚ್ಚ (ರೂ 5/ಪ್ರತಿ ದಿನ/ಪ್ರತಿ ಮಗುವಿಗೆ) ದಂತೆ ಖರ್ಚು ಮಾಡಬೇಕು. ಟಿಎಲ್‌ಎಂನಲ್ಲಿ ಯಾವುದೇ ಬದಲಾವಣೆ ಇಲ್ಲ.
- ಮಧ್ಯಾಹ್ನದ ಉಪಹಾರವನ್ನು ಕೇಂದ್ರ ನಡೆದ ದಿನಗಳಿಗೆ ಮಾತ್ರ ಖರ್ಚು ಮಾಡುವುದು

6) ಹಣಕಾಸು ಸೌಲಭ್ಯ ವಿಸ್ತರಣೆಯಲ್ಲಿ ಅನುಸರಿಸಬೇಕಾದ ಹಂತಗಳು

- ಸಂಬಂದಿಸಿದ ಮದರಸ ಸಂಸ್ಥೆಗಳಿಂದ ಧನ ಸಹಾಯಕ್ಕೆ ಲಿಖಿತ ಕೋರಿಕೆ.
- ಕೋರಿಕೆ ಆಧರಿಸಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಂಸ್ಥೆಯ ಕಾರ್ಯದರ್ಶಿ/ಅಧ್ಯಕ್ಷರು. ಇವರ ಪರಸ್ಪರ ಒಡಂಬಡಿಕೆ ಪತ್ರ
- ತರುವಾಯ ಸಿಆರ್‌ಸಿ ಹಾಗೂ ಬಿಇಓ ರವರಿಂದ ಸ್ಥಳ ತನಿಖೆ.
- ಕೇಂದ್ರ ಪ್ರಾರಂಭವಾದ 15 ದಿನಗಳೊಳಗೆ ಸೂಕ್ತ ಪರಿಶೀಲನೆ ಹಾಗೂ ಮದರಸ ಸಂಸ್ಥೆಗೆ 40 ಪ್ರತಿ ಶತ ಹಣ ಬಿಡುಗಡೆ.
- 05 ತಿಂಗಳ ತರುವಾಯ ಸೂಕ್ತ ಪರಿಶೀಲನೆ ಹಾಗೂ 40 ಪ್ರತಿ ಶತ(ಎರಡನೇ ಕಂತು) ಹಣ ಬಿಡುಗಡೆ.
- ಇಲಾಖಾ ಅಧಿಕಾರಿಗಳು ಮದರಸ/ಸಂಸ್ಕೃತ ಪಾಠ ಶಾಲೆಗಳಿಗೆ ಆಗಾಗ್ಗೆ ಸಂದರ್ಶನ ನೀಡುವುದು. ಉರ್ದು ಸಂಯೋಜಕರನ್ನು ನೋಡಲ್ ಅಧಿಕಾರಿಯಾಗಿ ನಿಯೋಜಿಸುವುದು.
- ಅಂತಿಮವಾಗಿ ಮಕ್ಕಳ ಕಲಿಕೆ ಪರಿಶೀಲನೆ ಹಾಗೂ 20 % ಹಣ ಬಿಡುಗಡೆ.
- ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಮದರಸ ಸಂಸ್ಥೆಗಳು ನಿಯಮಾನುಸಾರ ಮಕ್ಕಳ ಕಲಿಕಾ ಮೌಲ್ಯಮಾಪನ ನಡೆಸಿ ಮುಂದಿನ ವರ್ಷ ಮಕ್ಕಳಿಗೆ ಮುಂದಿನ ಸೂಕ್ತ ತರಗತಿಯಲ್ಲಿ ಕಲಿಯಲು ಕಡ್ಡಾಯವಾಗಿ ಅವಕಾಶ ನೀಡುವುದು. ಈ ರೀತಿ ಮಕ್ಕಳು ಮುಖ್ಯವಾಹಿನಿಗೆ ಬರುತ್ತಿರುವುದರ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಖಚಿತ ಪಡಿಸಿಕೊಳ್ಳಬೇಕು.

7) ಮದರಸ/ಸಂಸ್ಕೃತ ಪಾಠ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಸರ್ಕಾರವು ಒದಗಿಸುತ್ತಿರುವ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

8) ಸ್ವಯಂ ಸೇವಕರಿಗೆ 15 ದಿನದ ತರಬೇತಿಯನ್ನು ನೀಡಲು ಜಿಲ್ಲಾ ಹಂತದಲ್ಲಿ ಕ್ರಮ ಮಾಡುವುದು.

ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಮೇಲಿನಂತೆ ಕ್ರಮಕೈಗೊಳ್ಳಲು ತಿಳಿಸಿದೆ. ಮೇಲ್ಕಂಡ ಬದಲಾವಣೆಗಳನ್ನು ಹೊರತುಪಡಿಸಿ ದಿನಾಂಕ: 16.04.2007ರ ಸುತ್ತೋಲೆಯ ಅಂಶಗಳನ್ನು ಮತ್ತೊಮ್ಮೆ ಪುನರುಚ್ಚರಿಸಲಾಗಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.

ಪ್ರತಿಯನ್ನು,

1. ರಾಜ್ಯದ ಎಲ್ಲಾ ಡಿಡಿಪಿಐ ಮತ್ತು ಡಿವೈಪಿಸಿ ಯವರಿಗೆ
2. ರಾಜ್ಯದ ಎಲ್ಲಾ ಬಿಇಒ/ಬಿಆರ್‌ಸಿ ಇವರಿಗೆ ಸಂಬಂಧಿಸಿದ ಡಿಡಿಪಿಐ ಮೂಲಕ.